ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5067/2014

ಪ್ರಾ ಸಾ 6 ಚಾ ಸಾ 5

ಹೆಸರುಃ ಪದ್ಮನಾಭ

ತಂದೆಯ ಹೆಸರುಃ ಬೋರೇಗೌಡ

ವಯಸ್ಸುಃ 67 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಭೈರಾಪಟ್ಟಣ ಗ್ರಾಮ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿ ವಿಚಾರಣೆ**

ಸಾಕ್ಷಿಯನ್ನು ದಿಃ 18.03.2021 ರಂದು ನ್ಯಾಯಾಲಯಕ್ಕೆ ಕರೆಸಿ
ಪ್ರಮಾಣವಚನ ಮಾಡಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಪ್ರಾ ಸಾ 5 ವೈರಮುಡಿ ಗೊತ್ತು. ಅವರು ನಮ್ಮ ಊರಿನವರು. ಅಂದಾಜು 10 ವರ್ಷದ ಹಿಂದೆ ಮದ್ಯಾಹ್ನದ ಸಮಯದಲ್ಲಿ ನಾನು ಮತ್ತು ಪ್ರಾ ಸಾ 5 ನಮ್ಮ ಊರಿನ ಮಾರಮ್ಮನ ದೇವಸ್ಥಾನದ ಬಳಿ ಕುಳಿತ್ತಿದ್ದೆವು. ಆಗ ಪೊಲೀಸರು ನಮ್ಮನ್ನು ಅಲ್ಲಿಗೆ ಕರೆದು ಒಂದು ಮಹಜರಿಗೆ

ನಮ್ಮ ಸಹಿ ಪಡೆದರು. ಈಗ ತೋರಿಸಿದ ನಿ ಪಿ 21 ನಾವು ಸಹಿ ಮಾಡಿದ ಮಹಜರ್ ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಕಂಡು ಬರುತ್ತದೆ. (ನಿ ಪಿ 21 ಜೆರಾಕ್ಸ್ ಪ್ರತಿಯಾಗಿರುತ್ತದೆ.) ಪೊಲೀಸರು ಮಹಜರಿಗೆ ಸಹಿ ಪಡೆಯುವಾಗ ಒಂದು ಮಹಿಳೆಯನ್ನು ಸದರಿ ಜಾಗದಲ್ಲಿ ಕಾರಿಗೆ ಹತ್ತಿಸಿ ಕೊಂಡಿದ್ದರು ಎಂದು ಹೇಳಿ ಸಹಿ ಪಡೆದಿದ್ದರು.

**ಪಾಟೀ ಸವಾಲುಃ 1, 2 ಮತ್ತು 4ನೇ ಆರೋಪಿತರುಗಳು ತಲೆಮರೆಸಿಕೊಂಡಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)